ವರ್ಷ	ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ
2009–10	17,298
2010.11	15,889
2011–12	21,719

ಇ) ಕಳೆದ ಮೂರು ವರ್ಷಗಳಲ್ಲಿ ಮೂರು ಭ್ರಷ್ಟಾಚಾರ ಪ್ರಕರಣಗಳು ದಾಖಲಾಗಿವೆ.

1) ಒಬ್ಬರು ಲೋಕಾಯುಕ್ತ ದಾಳಿಗೆ ಒಳಗಾಗಿದ್ದು, ಸರ್ಕಾರದ ಹಂತದಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.
2) ಒಬ್ಬರ ವಿರುದ್ಧ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತನ್ನು ತೆರವುಗೊಳಿಸಲಾಗಿದೆ.
3) ಇನ್ನೊಬ್ಬ ಅಧಿಕಾರಿ ಅಮಾನತ್ತಿನಲ್ಲಿರುವವರು.

ಈ) ಏಪ್ರಿಲ್–2012ರ ಅಂತ್ಯಕ್ಕೆ ವಿವಿಧ ಯೋಜನಾ ಲೆಕ್ಕ ಶೀರ್ಷಿಕೆಗಳಡಿ ಇದ್ದ ಬಾಕಿ ಬಿಲ್ಲಿನ ಮೊತ್ತ ರೂ 8,545.39 ಲಕ್ಷಗಳು.

ಅರ್ಕಾವತಿ ಪುನಶ್ಚೇತನ ಯೋಜನೆಯ ಬಗ್ಗೆ

59 (137), **ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ.ಲೇಔಟ್)**

ಪ್ರಶ್ನೆಗಳು

ಅ)ಅರ್ಕಾವತಿ ಪುನಶ್ಚೇತನ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಯಿತು; ಅದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು?

ಆ) ಯೋಜನೆಗಾಗಿ ಕೈಗೊಂಡಿರುವ ಕಾಮಗಾರಿಗಳ ವಿವರ ನೀಡುವುದು?

ಇ) ಯೋಜನೆ ಯಾವಾಗ ಪೂರ್ಣಗೊಳ್ಳುವುದು?

ಈ) ಇದರಿಂದ ಆಗುವ ಪ್ರಯೋಜನಗಳೇನು?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಉತ್ತರಗಳು

ಅ) ಅರ್ಕಾವತಿ ನದಿ ಪಾತ್ರದ ಪುನಶ್ಚೇತನ ಕಾರ್ಯಕ್ರಮಕ್ಕೆ 3 ಉಪ ಜಲಾನಯನ ಪ್ರದೇಶಗಳ ಒಟ್ಟು ರೂ.22.43 ಕೋಟಿಗಳ ಅಂದಾಜಿಗೆ

ಸರ್ಕಾರದಿಂದ ದಿನಾಂಕ: 19–10–2011 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಅರ್ಕಾವತಿ ನದಿ ಪುನಶ್ಚೇತನದ ಕಾಮಗಾರಿಯ ಈ ಕೆಳಕಂಡ 3 ಪ್ಯಾಕೇಜ್‌ಗಳ ಟೆಂಡರ್‌ಗಳು ಕಾವೇರಿ ನೀರಾವರಿ ನಿಗಮದಲ್ಲಿ ಅನುಮೋದನೆಯಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ. ಅಲ್ಲದೆ, ಇವುಗಳ ಟೆಂಡರ್‌ನ ಮೊತ್ತದ ವಿವರ ಇಂತಿದೆ :

(ರೂ.ಕೋಟಿಗಳಲ್ಲಿ)

ಕ್ರ ಸಂ	ಪ್ಯಾಕೇಜ್	ಗುತ್ತಿಗೆ ಮೊತ್ತ
1	ಅರ್ಕಾವತಿ ನದಿಯ ಉಗಮ ಸ್ಥಾನವಾದ ನಂದಿಬೆಟ್ಟದಿಂದ ಹೆಸರಘಟ್ಟ ಜಲಾಶಯದವರೆಗೆ	9.95
2	ಕುಮುದ್ವತಿ ನದಿಯ ಉಗಮ ಸ್ಥಾನದಿಂದ ತಿಪ್ಪಗೊಂಡನಹಳ್ಳಿ ಜಲಾಶಯದವರೆಗೆ	8.06
3	ಹೆಸರಘಟ್ಟ ಜಲಾಶಯದಿಂದ ತಿಪ್ಪಗೊಂಡನಹಳ್ಳಿ ಜಲಾಶಯದವರೆಗೆ	6.07

ಕಾಮಗಾರಿಯು ಪ್ರಾರಂಭಿಕ ಹಂತದಲ್ಲಿದೆ. ವಿವರವಾದ ಯೋಜನಾ ವರದಿ ತಯಾರಿಸಲು ಹಾಗೂ ರೆವಿನ್ಯೂ ಸರ್ವೆ ಮತ್ತು ಗಡಿ ಕಲ್ಲುಗಳನ್ನು ನೆಡುವ ಕಾಮಗಾರಿಗಳಿಗೆ ಈವರೆಗೆ ರೂ.83.04 ಲಕ್ಷ ವೆಚ್ಚ ಮಾಡಲಾಗಿದೆ.

ಆ) ಈ ಅಂದಾಜಿನಲ್ಲಿ, ನದಿ ಹಾಗೂ ನದಿಗೆ ಸೇರುವ ಹಳ್ಳಗಳಲ್ಲಿ ಬೆಳೆದಿರುವ ಗಿಡಗಂಟೆಗಳು ಹಾಗೂ ಹೂಳನ್ನು ತೆಗೆದು ನೀರಿನ ಸರಾಗ ಹರಿವಿಗೆ ಅನುವಾಗುವಂತೆ ನಾಲೆಯನ್ನು re-sectioning ಮಾಡುವ ಕಾಮಗಾರಿಗಳನ್ನು ಪ್ರಸ್ತಾಪಿಸಲಾಗಿದೆ.

ಇ) ಈ ಕಾಮಗಾರಿಯ ಅನುಷ್ಠಾನಕ್ಕೆ 9 ತಿಂಗಳ ಅವಧಿಯನ್ನು ನಿಗದಿಪಡಿಸಲಾಗಿದೆ. ಇವುಗಳಿಗೆ ಕರಾರು ಮಾಡಿಕೊಳ್ಳಲು ಸಂಬಂಧಪಟ್ಟ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ.

ಈ) ಹರಿದು ಬರುವ ನೀರು ಸರಾಗವಾಗಿ ಅಡೆತಡೆಗಳಿಲ್ಲದೆ ಹರಿಯುವಂತೆ ಮಾಡುವುದು ಈ ಕಾಮಗಾರಿಯ ಪ್ರಮುಖ ಉದ್ದೇಶ. ಏತನ್ಮಧ್ಯೆ, ಹೂಳು ತೆಗೆಯುವುದರಿಂದ ಹಳ್ಳಗಳ ಮುಖಾಂತರ ಭೂ–ಜಲ ಮಟ್ಟ ಹೆಚ್ಚಿಸುವುದಕ್ಕೂ ಸಹಾ ಸಹಕಾರಿಯಾಗುತ್ತದೆ.